ಶ್ರೀ ಎಸ್. ಸುರೇಶ್ ಕುಮಾರ್:– ಮಾನ್ಯ ಅಧ್ಯಕ್ಷರೆ, 230 ಪ್ರಶ್ನೆಗಳ ಪೈಕಿ 130 ಪ್ರಶ್ನೆಗಳಿಗೆ ಮತ್ತು 221 ಪ್ರಶ್ನೆಗಳ ಪೈಕಿ 95 ಪ್ರಶ್ನೆಗಳಿಗೆ ಉತ್ತರವನ್ನು ಮಂಡಿಸಿದ್ದಾರೆ. ಇನ್ನುಳಿದ ಪ್ರಶ್ನೆಗಳೆಲ್ಲ ಏನಾಗುತ್ತವೆ? ಅವು ತಿರಸ್ಕೃತವಾಗಿವೆ ಎಂದಾದರೂ ಸರ್ಕಾರ ಉತ್ತರ ಕೊಟ್ಟುಬಿಡಲಿ.

ಅಧ್ಯಕ್ಷರು:– ಅವುಗಳಿಗೆ ಉತ್ತರ ಬಂದಿಲ್ಲ. ಆದ್ದರಿಂದ ನಾವು ನಮ್ಮ ವತಿಯಿಂದ ಯಾರ್ಯಾರು ಉತ್ತರ ಕಳುಹಿಸಿಲ್ಲವೋ, ಅವರಿಗೆ ಇನ್ನೊಂದು reminder issue ಮಾಡಿ ಉತ್ತರವನ್ನು ತರಿಸಿಕೊಡುವಂಥ ಪ್ರಯತ್ನವನ್ನು ಖಂಡಿತವಾಗಿ ಮಾಡುತ್ತೇವೆ.

ಅಧ್ಯಕ್ಷರು:– ಈಗ ಅರ್ಜಿಯನ್ನೊಪ್ಪಿಸುವುದು.

4. ಅರ್ಜಿಯನ್ನೊಪ್ಪಿಸುವುದು

ಶ್ರೀ ಎನ್.ಹೆಚ್. ಶಿವಶಂಕರರೆಡ್ಡಿ (ಉಪ ಸಭಾಧ್ಯಕ್ಷರು ಹಾಗೂ ಅರ್ಜಿಗಳ ಸಮಿತಿಯ ಅಧ್ಯಕ್ಷರು):– ಮಾನ್ಯ ಸಭಾಧ್ಯಕ್ಷರೆ, ಎನ್.ಟಿ.ಐ. ಗೃಹ ನಿರ್ಮಾಣ ಸಹಕಾರ ಸಂಘವು ಕಾನೂನು ಬಾಹಿರವಾಗಿ ನಿವೇಶನಗಳನ್ನು ಹಂಚಿಕೆ ಮಾಡಿರುವ ಬಗೆಗಿನ ಅರ್ಜಿಯನ್ನು ಸದನಕ್ಕೆ ಒಪ್ಪಿಸುತ್ತಿದ್ದೇನೆ.

ಅಧ್ಯಕ್ಷರು:– ಅರ್ಜಿಯನ್ನು ಒಪ್ಪಿಸಲಾಯಿತು.

ಅಧ್ಯಕ್ಷರು:– ಈಗ ವಿತ್ತೀಯ ಕಾರ್ಯಕಲಾಪಗಳು.

5. ವಿತ್ತೀಯ ಕಾರ್ಯಕಲಾಪಗಳು

ಶ್ರೀ ಟಿ.ಬಿ. ಜಯಚಂದ್ರ (ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳು ಹಾಗೂ ಸಂಸದೀಯ ವ್ಯವಹಾರಗಳು, ಶಾಸನ ರಚನೆ ಮತ್ತು ಪಶುಸಂಗೋಪನೆ ಹಾಗೂ ಮುಜರಾಯಿ ಸಚಿವರು) (ಮಾನ್ಯ ಮುಖ್ಯಮಂತ್ರಿಗಳ ಪರವಾಗಿ):– ಮಾನ್ಯ ಅಧ್ಯಕ್ಷರೆ, 2014–15ನೇ ಸಾಲಿನ ಪೂರಕ ಅಂದಾಜುಗಳನ್ನು (ಮೂರನೆಯ ಹಾಗೂ ಅಂತಿಮ ಕಂತು) ಮಂಡಿಸುತ್ತಿದ್ದೇನೆ.